(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:44/2015-16 ದಿನಾಂಕ:09.06.2016.

**ಉಪಸ್ಥಿತರು: ಅವಿನಾಶ್ ಮೆನನ್‌ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

*****

**ವಾದಿಗಳು: ಶ್ರೀ/ ಶ್ರೀಮತಿ**

1] ಬಿ.ವಿ.ಪಾರ್ವತಿ ಗಂಡ ದಿ॥ ಬಿ.ವಿ.ಸಂಗಪ್ಪ,
2] ಬಿ.ವಿ.ಬೈಲಪ್ಪ ತಂದೆ ದಿ॥ ಬಿ.ವಿ.ಸಂಗಪ್ಪ,
ವಾಸ: ಬನ್ನಿಕಲ್ಲು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.

**[ ಶ್ರೀ ಜೆ.ವೆಂಕೋಬಣ್ಣ ಶೆಟ್ಟಿ, ವಕೀಲರು, ಹೊಸಪೇಟೆ. ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ಬಿ.ವಿ.ಬಸವಣೆಪ್ಪ ತಂದೆ ದಿ॥ ನಂಜುಡಪ್ಪ,
2] ಬಿ.ವಿ.ಪರಮೇಶ್ವರಪ್ಪ ತಂದೆ ದಿ॥ ನಂಜುಡಪ್ಪ,
ವಾಸ: ಬನ್ನಿಕಲ್ಲು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು,

**[ ಶ್ರೀ ಬಿ.ವಿ.ಶಿವಯೋಗಿ, ವಕೀಲರು, ಹಗರಿಬೊಮ್ಮನಹಳ್ಳಿ. ]**

3] ಉಪ ತಹಶೀಲ್ದಾರರು, ನಾಡಕಛೇರಿ, ಹಂಪಸಾಗರ, ಹಗರಿಬೊಮ್ಮನಹಳ್ಳಿ ತಾಲೂಕು.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಂಪಸಾಗರ | ಬನ್ನಿಕಲ್ಲು | 196 | 07 ಎಕರೆ 00 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಬನ್ನಿಕಲ್ಲು ಗ್ರಾಮದ ಸ.ನಂ.196 ಪೈಕಿ ವಿಸ್ತೀರ್ಣ:07 ಎಕರೆ 00 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರರು, ಹಂಪಸಾಗರ, ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ನಾಕ/ಪಹಣಿ.ವಿವಾದ/10/2014-15 ದಿನಾಂಕ:07.07.2014 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:15.07.2015 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:30.07.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

**ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದಗಳನ್ನು ಆಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.**

1. ಸದರಿ ವ್ಯಾಜ್ಯದ ಜಮಿನು ಮೂಲತ: ಬಿ.ವಿ.ಸಂಗಪ್ಪ [ವಾದಿ-1 ರವರ ಗಂಡ ಹಾಗೂ ವಾದಿ-2 ರವರ ತಂದೆ] ಇವರಿಗೆ ಸೇರಿದ್ದು, ಇವರಿಗೆ ಸದರಿ ವ್ಯಾಜ್ಯದ ಜಮೀನು ಬಿ.ವಿ.ಸಂಗಪ್ಪ ಅವರ ತಾಯಿ ಹಾಗೂ ಸಹೋದರರ ನಡುವೆ ದಿನಾಂಕ:26.06.2002 ರಂದು ಮಾಡಿಕೊಂಡ ಪಾಲು ವಿಭಾಗ ದಸ್ತಾವೇಜಿನ ಮೂಲಕ ಇವರ ಪಾಲಿಗೆ ಬಂದಿದ್ದು, ಆ ಪ್ರಕಾರವಾಗಿ ಬಿ.ವಿ.ಸಂಗಪ್ಪ ಇವರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದು, ತಮ್ಮ ಜೀವಿತಾವಧಿಯವರೆಗೂ ತಾವೇ ಸದರಿ ಜಮೀನಿನ ಹಕ್ಕು ಮತ್ತು

ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ಇವರ ಮರಣಾನಂತರ, ವಾಧಿಗಲು ತಮ್ಮ ಹೆಸರಿಗೆ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಪ್ರತಿವಾದಿಗಳು ತಕರಾರು ನೀಡಿದ್ದರಿಂದ, ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣ ಎಂದು ಪರಿಗಣಿಸಿ ಉಪತಹಶೀಲ್ದಾರರು, ನಾಡಕಛೇರಿ, ಹಂಪಸಾಗರ, ಇವರು : ಸಂ/ಕಂ/ನಾಕ/ಪಹಣಿ.ವಿವಾದ/10/2014-15 ರ ಮೂಲಕ ವಿಚಾರಣೆ ನಡೆಸಿ, ದಿನಾಂಕ:07.07.2014 ರಂದು ವಾದಿ ಮತ್ತು ಪ್ರತಿವಾದಿಗಳು ಸಕ್ಷಮ ಪ್ರಾಧಿಕಾರದ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಬೇಕಾಗಿ ಆದೇಶ ಮಾಡಿರುವುದಾಗಿ, ಸದರಿ ಆದೇಶ ಮಾಡುವಾಗ ಪ್ರತಿವಾದಿ-3 ರವರು ಸರಿಯಾದ ವಿಚಾರಣೆ ನಡೆಸದೇ, ಸತ್ಯಾಂಶಗಳನ್ನು ಪರಿಶೀಲಿಸದೇ ಕಾನೂನುಬಾಹಿರವಾದ ಆದೇಶ ಮಾಡಿರುವುದಾಗಿ, ಸದರಿ ಆದೇಶದಿಂದ ಬಾದಿತಗೊಂಡ ವಾದಿಗಳು ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ಹಾಗೂ ಪ್ರತಿವಾದಿಗಳಿಗೆ ಸದರಿ ವ್ಯಾಜ್ಯದ ಜಮೀನಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲವೆಂದು, ಹಾಗೂ ಸದರಿ ವ್ಯಾಜ್ಯದ ಜಮೀನನ್ನು ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ದಿ॥ಬಿ.ವಿ.ಸಂಗಪ್ಪ ಇವರ ಕುಟುಂಬದವರಿಂದ ಯಾವುದೇ ರೀತಿಯ ಆಕ್ಷೇಪಣೆ ಹಾಗೂ ತಕರಾರು ಇರುವುದಿಲ್ಲವೆಂದು ಕಾರಣ ಸದರಿ ಪ್ರಶ್ನಿತ ಆದೇಶವನ್ನು ರದ್ದುಪಡಿಸಿ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆಗಾಗಿ ಸೂಕ್ತ ನಿರ್ದೇಶನ ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

2. ಪ್ರತಿವಾದಿಗಳ ಪರ ವಕೀಲರು, ಕೇವಲ ವಕಾಲತ್ತನ್ನು ಸಲ್ಲಿಸಿದ್ದು ಯಾವುದೇ ಲಿಖಿತ ವಾದ ಮಂಡಿಸಿರುವುದಿಲ್ಲ ಹಾಗೂ ಸತತವಾಗಿ ವಿಚಾರಣೆಗೆ ಗೈರುಹಾಜರಾಗಿರುವುದು ಕಂಡುಬಂದಿರುತ್ತದೆ.

ಆದುದರಿಂದ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಬನ್ನಿಕಲ್ಲು ಗ್ರಾಮದ ಸ.ನಂ.196 ಪೈಕಿ ವಿಸ್ತೀರ್ಣ:07 ಎಕರೆ 00 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರರು, ಹಂಪಸಾಗರ, ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ನಾಕ/ಪಹಣಿ.ವಿವಾದ/10/2014-15 ದಿನಾಂಕ:07.07.2014 ರ ಪ್ರಶ್ನಿತ ಆದೇಶವನ್ನು ರದ್ದುಪಡಿಸುತ್ತಾ, ಪೋತಿ ವಾರಸ ಪ್ರಕಾರ ಬಿ.ವಿ.ಸಂಗಪ್ಪ ಇವರ ನೇರವಾರಸುದಾರರಾದ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಬನ್ನಿಕಲ್ಲು ಗ್ರಾಮದ ಸ.ನಂ.196 ಪೈಕಿ ವಿಸ್ತೀರ್ಣ:07 ಎಕರೆ 00 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರರು, ಹಂಪಸಾಗರ, ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂ/ಕಂ/ನಾಕ/ಪಹಣಿ.ವಿವಾದ/10/2014-15 ದಿನಾಂಕ:07.07.2014 ರ ಪ್ರಶ್ನಿತ ಆದೇಶವನ್ನು ರದ್ದುಪಡಿಸುತ್ತಾ, ಪೋತಿ ವಾರಸ ಪ್ರಕಾರ ಬಿ.ವಿ.ಸಂಗಪ್ಪ ಇವರ ನೇರವಾರಸುದಾರರಾದ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಅವಿನಾಶ್ ಮೆನನ್‌ರಾಜೇಂದ್ರನ್, ಭಾ.ಆ.ಸೇ ]

**ಸಹಾಯಕ ಆಯುಕ್ತರು,**

**ಹೊಸಪೇಟೆ.**

ಸಹಾಯಕ ಆಯುಕ್ತರು
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು**:- ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.